**ಸಾಕ್ಷಿಯನ್ನು ದಿಃ 11.10.2023 ರಂದು ಕರೆಸಿ ಪ್ರಮಾಣ ಬೋಧಿಸಲಾಯಿತು.**

ಪಾಟೀ ಸವಾಲುಃ ವಾದಿ ಪರ ಶ್ರೀ.ಕೆ.ಎಂ.ವಿ ವಕೀಲರಿಂದಃ

ದಾವಾಸ್ವತ್ತುಗಳು ನಮ್ಮ ಗ್ರಾಮದಿಂದ 10 ಕಿ.ಮೀ ಅಂತರದಲ್ಲಿ ಇರುತ್ತದೆ. ದಾವಸ್ವತ್ತುಗಳ ಸಮೀಪ ಮತ್ತು ದಾನಪತ್ರದ ಸ್ವತ್ತುಗಳ ಸಮೀಪ ನನಗೆ ಸಂಬಂಧಪಟ್ಟ ಯಾವುದೇ ಆಸ್ತಿ ಇರುವುದಿಲ್ಲ. ನಿಡಿ 4 ದಾನಪತ್ರ ಮಾಡುವಾಗ ಸದರಿ ಸ್ವತ್ತಿನ ಸಂಬಂಧ ಪ್ರಕರಣಗಳು ಬಾಕಿ ಇರುವ ಬಗ್ಗೆ ನಾನು ತಿಳಿದುಕೊಂಡಿಲ್ಲ. ನನ್ನನ್ನು ನಿಡಿ 4 ರ ದಾನಪತ್ರಕ್ಕೆ ಸಾಕ್ಷಿಯಾಗಿ ಬರುವಂತೆ 1 ನೇ ಪ್ರತಿವಾದಿ ವೆಂಕಟಪ್ಪ ಕರೆದಿರುತ್ತಾರೆ. ದಿನಾಂಕ 01-07-2021 ರಂದು 1 ನೇ ಪ್ರತಿವಾದಿ ನನ್ನನ್ನು ಉಪನೋಂದಣಾಧಿಕಾರಿಗಳ ಕಚೇರಿ, ಬಂಗಾರಪೇಟೆಯಲ್ಲಿ ಸುಮಾರು 10.30 ರ ಸಮಯಕ್ಕೆ ಕರೆದಿರುತ್ತಾರೆ. ಆ ದಿನ 1 ನೇ ಪ್ರತಿವಾದಿಯ ಜೊತೆ ಆತನ ಮಗ ಶ್ರೀನಿವಾಸ್ ಇದ್ದರು. ನನ್ನ ಜೊತೆ ಆ ದಿನ ಉಮೇಶ್ ಮತ್ತು ವೆಂಕಟೇಶ್ ಸಹಾ ಇದ್ದರು. ನಾನು ಹೋಗುವ ಮೊದಲೇ ಉಮೇಶ್ ಮತ್ತು ವೆಂಕಟೇಶ್ ಇದ್ದರು. 1 ನೇ ಪ್ರತಿವಾದಿಯು ತನ್ನ ಸ್ವತ್ತನ್ನು ಮಗನಿಗೆ ದಾನ ಮಾಡುವುದಾಗಿ ಈ ಸಂಬಂಧ ಪತ್ರಕ್ಕೆ ಸಹಿ ಮಾಡಲು ಬರುವಂತೆ ನನ್ನನ್ನು ಕರೆದರು

1 ನೇ ಪ್ರತಿವಾದಿಯು ತನಗೆ ವಯಸ್ಸಾಗಿದ್ದು ಆ ಕಾರಣ ಮಗನಿಗೆ ದಾನಪತ್ರ ಬರೆಯುತ್ತಿರುವುದಾಗಿ ತಿಳಿಸಿದರು. ನಿಡಿ 4 ರ ದಾನಪತ್ರವನ್ನು ಪತ್ರ ಬರಹಗಾರ ರಾಮೇಗೌಡ ರವರು ತಯಾರಿಸಿರುತ್ತಾರೆ. ದಾನಪತ್ರ ಬರೆಯಲು ಮಾಹಿತಿಯನ್ನು 1 ನೇ ಪ್ರತಿವಾದಿ ನೀಡಿರುತ್ತಾರೆ. ಆ ದಿನ ಸದರಿ ಪತ್ರ ಬರೆಯಲು ಯಾವ ದಾಖಲಾತಿಗಳನ್ನು ತಂದಿದ್ದರು ಎಂದು ನೆನಪಿಲ್ಲ. ನಾನು 1 ನೇ ಪ್ರತಿವಾದಿ ಹೆಸರಿನಲ್ಲಿದ್ದ ಪಹಣಿಯನ್ನು ನೋಡಿರುತ್ತೇನೆ. ಸರ್ವೆ ನಂ.134/2 ವಿಸ್ತೀರ್ಣ 1 ಎಕರೆ 21 ಕಾಲು ಗುಂಟೆ ಜಮೀನು ಸಂಬಂದ ನಿಡಿ 4 ದಾನಪತ್ರ ಬರೆಯಲಾಗಿದೆ

ನಿಡಿ 4 ದಾನಪತ್ರದ ಸಾಕ್ಷಿಗಳಾದ ಉಮೇಶ್ ಮತ್ತು ವೆಂಕಟೇಶ್ ರವರು ನನಗೆ ಪರಿಚಯ ಇರಲಿಲ್ಲ. 1 ನೇ ಪ್ರತಿವಾದಿ ನನಗೆ ಮೊದಲಿನಿಂದಲೂ ಪರಿಚಯ ಇರುತ್ತಾರೆ. 1 ನೇ ಪ್ರತಿವಾದಿ ತರಕಾರಿ ಮಾರಾಟ ಮಾಡಲು ಮಾರುಕಟ್ಟೆಗೆ ಬರುತ್ತಿದ್ದರು. ಆಗ ನನಗೆ ಪರಿಚಯ ಆಗಿರುತ್ತಾರೆ.

ನಾನು ಈಗಿನ ಶಾಸಕರ ಆಪ್ತ ಸಹಾಯಕ ಎಂದರೆ ಸರಿ. ನಾನು ನನ್ನ ಅಧಿಕಾರ ವ್ಯಾಪ್ತಿಯನ್ನು ದುರುಪಯೋಗ ಮಾಡಿಕೊಂಡು ನಿಡಿ 4 ದಾನಪತ್ರ ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ರಾಮೆಗೌಡರ ಕಚೇರಿಯಲ್ಲಿ ದಾನಪತ್ರ ತಯಾರಿಸಲಾಯಿತು ಕನ್ನಡದಲ್ಲಿ ದಾನಪತ್ರ ಬರೆಯಲಾಗಿತ್ತು ಮೊದಲು ಉಮೇಶ್, ಆನಂತರ ವೆಂಕಟೇಶ್ , ಆನಂತರ ನಾನು ಸದರಿ ಪತ್ರಕ್ಕೆ ಸಹಿ ಮಾಡಿರುತ್ತೇವೆ 1 ನೇ ಪ್ರತಿವಾದಿ ಮತ್ತು ಅವರ ಮಗ ಸಹಾ ದಾನಪತ್ರಕ್ಕೆ ಸಹಿ ಮಾಡಿರುತ್ತಾರೆ

ಪ್ರತಿವಾದಿ 7 ರವರು ಪ್ರತಿವಾದಿ 1 ರವರ ಮುಖಾಂತರ ಪರಿಚಯವಾಗಿರುತ್ತಾರೆ. ಸುಮಾರು 5 ವರ್ಷಗಳ ಹಿಂದೆ ಪ್ರತಿವಾದಿ 7 ರವರ ಪರಿಚಯ ಆಗಿರುತ್ತದೆ. ನಾನು, ಪ್ರತಿವಾದಿ 1 ಮತ್ತು 7 ಹಾಗೂ ಇತರರು ಸೇರಿ ವಾದಿಗಳಿಗೆ ಮೋಸ ಮಾಡಲು ನಿಡಿ 4 ದಾನಪತ್ರವನ್ನು ಸೃಷ್ಟಿಸಿರುತ್ತೇವೆ ಎಂದರೆ ಸರಿಯಲ್ಲ ರಾಮೆಗೌಡ ಎಂದು ಯಾರು ಪತ್ರಬರಹಗಾರರು ಇಲ್ಲ ಎಂದರೆ ಸರಿಯಲ್ಲ

<u>**ಮರುವಿಚಾರಣೆಃ ಇಲ್ಲಾ**</u>

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕೀಕೃತ ಮಾಡಲಾಗಿದೆ.)

ಓ ಹೇ ಕೇ ಸರಿ ಇದೆ.

**sd/-**

**(ಕೇಶವಮೂರ್ತಿ.ಬಿ)**

**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ,**

**ಬಂಗಾರಪೇಟೆ**